(ಇಂದು ದಿನಾಂಕಃ 29-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ K.R ವಕೀಲರಿಂದಃ**

ನಾನು 12 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ದಿನಗೂಲಿ ಆಧಾರದ ಮೇಲೆ ಮಾಡುತ್ತೇನೆ ಎಂದು ಹೇಳುತ್ತಾರೆ. ನಾನು ಅಪಘಾತ ಆದ ದಿನ ಕಛೇರಿ ಕೆಲಸದ ಮೇಲೆ ನರ್ಸರಿಗೆ ಹೋಗಿದ್ದೆ ಎಂದರೆ ಸರಿ. ನಾನು ರಜನೀಶ್ ಮೋಟಾರ ಸೈಕಲ್ ಮೇಲೆ ಹೋಗಿದ್ದೆವು. ರಜನೀಶ್ ಮೋಟಾರ ಸೈಕಲ್ ಚಾಲನೆ ಮಾಡುತ್ತಿದ್ದ. ಮೋಟಾರ ಸೈಕಲ್ ಅಪಘಾತ ಆಗಿಲ್ಲ ನಾನಾಗಿಯೇ ಹಿಂದಿನಿಂದ ಬಿದ್ದೆ ಎಂದರೆ ಸರಿಯಲ್ಲ. ನನ್ನ ಸಂಬಂಧಿ ಉಮಾ ಪಾಟೀಲ ದೂರು ನೀಡಿದ್ದಾರೆ. ದಿಃ 01-08-2021 ರಂದು ಅಪಘಾತ ಆಗಿದೆ. ನಾನು ಪೋಲೀಸರಿಗೆ ದಿಃ 24-08-2021 ರಂದು ಹೇಳಿಕೆ ನೀಡಿದ್ದೇನೆ. ನನ್ನ ಹೇಳಿಕೆಯಲ್ಲಿ ಅಪಘಾತ ಕಮಾನು ಬಳಿ ಆಗಿದೆ ಎಂದು ಹೇಳಿದ್ದೇನೆ. ಅಪಘಾತ ದಿಃ 01-08-2021 ರಂದು ಆಗಿದೆ ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ. ನನ್ನ ಹೇಳಿಕೆಯಲ್ಲಿ ಅಪಘಾತ ದಿಃ 07-08-2021 ರಂದು ಆಗಿದೆ ಎಂದು ಉಲ್ಲೇಖ ಇದೆ ಎಂದರೆ ಪೋಲೀಸರು ತಪ್ಪಾಗಿ ಬರೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಪೋಲೀಸರು ತಪ್ಪಾಗಿ ಬರೆದುಕೊಂಡಿದ್ದಾರೆ ಎಂದು ನನ್ನ ಅರ್ಜಿಯಲ್ಲಿ ಹೇಳಿ ಬರೆಸಿಲ್ಲ. ನಾನಾಗಿಯೇ ಹಿಂದಿನಿಂದ ಬಿದ್ದು ಗಾಯ ಮಾಡಿಕೊಂಡಿದ್ದು ಮೋಟಾರು ಸೈಕಲ್ ಗೆ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಕಾರಣ ಅಪಘಾತ ಆದ ದಿನ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನಂತರ ಪೋಲೀಸರ ಜೊತೆ ಸೇರಿಕಾಗಿ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ರಜನೀಶ್ ನನ್ನ ಸಂಬಂಧಿ. ಆತನ ಬಳಿ ಮೋಟಾರ ಸೈಕಲ್ ಚಾಲನೆ ಮಾಡಲು ಡಿ.ಎಲ್ ಇದೆ. ಆತನ ಡಿ.ಎಲ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

ಅಪಘಾತ ಆದಾಗ ನನಗೆ ತಿಂಗಳಿಗೆ 25,000/- ಸಂಬಳ ಇತ್ತು. ಈಗ ಸಂಬಳ ಹೆಚ್ಚಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಈಗ ಕೆಲಸಕ್ಕೆ ಹೋಗುತ್ತಿಲ್ಲ ಎಂದು ಹೇಳುತ್ತಾರೆ. ನಾನು ಕೆಲಸಕ್ಕೆ ಹೋಗುತ್ತಿಲ್ಲ ಎಂದು ಅರಣ್ಯ ಇಲಾಖೆಯ ದಾಖಲಾತಿ

ಹಾಜರು ಪಡಿಸಿಲ್ಲ. ಅಪಘಾತ ಆಗಿ 2 ವರ್ಷಕ್ಕೆ ಈ ಅರ್ಜಿ ಸಲ್ಲಿಸಿದ್ದೇನೆ. ಅಪಘಾತದ ಸಂಬಂಧ ಆದ ವೈದ್ಯಕೀಯ ವೆಚ್ಚ ವನ್ನು ಇಲಾಖೆಯವರು ನನಗೆ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಮರುಪಾವತಿ ಪಡೆದಿಲ್ಲ ಎಂದು ತೋರಿಸಲು ಇಲಾಖೆಯಿಂದ ದಾಖಲಾತಿ ಹಾಜರು ಪಡಿಸಿಲ್ಲ, ಸಾಕ್ಷಿ ಮುಂದುವರಿದು ದಿನಗೂಲಿ ನೌಕರನಾದ ಕಾರಣ ಬಿಲ್ಲು ಮರುಪಾವತಿ ಮಾಡಿಲ್ಲ ಎಂದು ಹೇಳುತ್ತಾರೆ.

ಅಪಘಾತ ಆದ ನಂತರ ಮೊದಲು ಚಿಂಚೋಳಿ ಸರ್ಕಾರಿ ಆಸ್ಪತ್ರೆಗೆ ಹೋದೆ. ಅಲ್ಲಿಂದ ಬೀದರನ ಗುರುನಾನಕ ಆಸ್ಪತ್ರೆಗೆ ಹೋದೆ. ಅಲ್ಲಿ 8-9 ದಿನ ಒಳರೋಗಿಯಾಗಿದ್ದೆ. ಅದನ್ನು ತೋರಿಸಲು ಡಿಸ್ಚಾರ್ಜ ಕಾರ್ಡು ಹಾಜರು ಪಡಿಸಿದ್ದೇನೆ. ಅಲ್ಲಿ ನನಗೆ ಯಾವ ರೀತಿ ಚಿಕಿತ್ಸೆ ನೀಡಿದರು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲನ್ನು ಸುಳ್ಳು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಗುರುನಾನಕ ಆಸ್ಪತ್ರೆಯಲ್ಲಿ ನನಗೆ ಯಾವುದೇ ಸರ್ಜರಿ ಆಗಿಲ್ಲ ಎಂದರೆ ಸರಿಯಲ್ಲ. ಗುರುನಾನಕ ಆಸ್ಪತ್ರೆಯ ನಂತರ ಕಲಬುರಗಿಯ ಕೊಠಾರಿ ಆಸ್ಪತ್ರೆಗೆ ಹೋಗಿದ್ದೆ. ಕೊಠಾರಿ ಆಸ್ಪತ್ರೆಗೆ ವರ್ಷದ ಹಿಂದೆ ಹೋಗಿದ್ದೆ. ಅಪಘಾತದಿಂದಾದ ಗಾಯಗಳಿಂದಾಗಿ ನನಗೆ ಈಗ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಕೊಠಾರಿ ಆಸ್ಪತ್ರೆಯವರ ಜೊತೆ ಸೇರಿ ಹೆಚ್ಚಿನ ಪ್ರಮಾಣದ ಅಂಗನ್ಯೂನತೆ ತೋರಿಸುವ ಸುಳ್ಳು ದಾಖಲಾತಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-12 ರಲ್ಲಿ ಮಾತ್ರೆಯ ಬಿಲ್ಲು ಕೂಡ ಸೇರಿದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರನ ತಪ್ಪಿನಿಂದ ಅಪಘಾತ ಆಗಿಲ್ಲ ಕಾರಣ 2 ನೇ ಎದುರುದಾರ ಪರಿಹಾರ ನೀಡಲು ಜವಾಬ್ದಾರಿ ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.